'ಸ್ಪೆಷಲ್ ಮೈಸೂರ್ ಪಾಕ್'ಗೆ
ಇಂದೇ ಭೇಟಿ ಕೊಡಿ
ನ್ಯೂ ಬಾಂಬೆ ಟಿಫಾನಿಸ್
THE TASTE YOU LOVE THE NAME YOU TRUST
NEW BOMBAY TIFFANYS
ನಮ್ಮ ವಿಶೇಷತೆಗಳು: ಹೊಸ ಹೊಸ ಬಗೆಯ ಬೆಂಗಾಲಿ ಸ್ವೀಟ್ಸ್, ಮಿಲ್ಕ್ ಕೇಕ್, ಶುದ್ಧ ತುಪ್ಪದಿಂದ ತಯಾರಿಸಿದ ಸಿಹಿ ಮತ್ತು ಖಾರಾ ತಿಂಡಿಗಳು
1771/3 ವಿಕ್ಟೋರಿಯಾ ಕಾಂಪ್ಲೆಕ್ಸ್, ಸಯ್ಯಾಜಿರಾವ್ ರಸ್ತೆ, ಮೈಸೂರು
Contact: : ಮನೀಶ್ ಕುಮಾರ್,
ಮೊ: 9845111886, 4287475

ಆಂದೋಲನ
ದಿನಪತ್ರಿಕೆ
ಸಂಸ್ಥಾಪಕ ಸಂಪಾದಕ: ರಾಜಶೇಖರ ಕೋಟಿ

TATA MOTORS
PRERANA 26YRS
ಹೊಸ ಟಾಟಾ ಮ್ಯಾಜಿಕ್ ಎಕ್ಸ್‌ಪ್ರೆಸ್
8 ಆಸನಗಳ ಬಹುಉಪಯೋಗಿ ವಾಹನ
ಸಂಪೂರ್ಣ ಸ್ಟೀಲ್ ಬಾಡಿಯೊಂದಿಗೆ
ಬುಕ್ಕಿಂಗ್‌ಗಾಗಿ ಸಂಪರ್ಕಿಸಿ
ಪ್ರೇರಣಾ ಮೋಟಾರ್ಸ್
9663368536

ಸಂಪುಟ: ೪೭, ಸಂಚಿಕೆ: ೬, ರಾಷ್ಟ್ರೀಯ ಶಕ ೧೯೩೯ ಶಿಶಿರ:ಪುಷ್ಯ–ಮಾಘ ೧೬, ●ಪಂಚಮಿ – ಪೂ.ಫಾಲ್ಗುಣೆ, ಶನಿವಾರ, ಜ.೬, ೨೦೧೮, ದೂರವಾಣಿ: ೨೪೪೯೫೦೧, ೨೪೪೯೫೦೮, ೨೪೪೯೫೦೫, ಫ್ಯಾಕ್ಸ್: ೨೪೪೯೫೦೩, ಪುಟ : ೧೨, ರೂ. ೩

ಚರಂಡಿಗಿಳಿದು ಬರಿಗೈಯಲ್ಲಿ ಸ್ವಚ್ಛತೆ

- ನಂಜನಗೂಡಲ್ಲಿ ಗ್ಲೌಸ್, ಶೂ ಇಲ್ಲದೇ ಮಲ, ತ್ಯಾಜ್ಯ ಬಾಚಿದ ಕಾರ್ಮಿಕ
- ಸರ್ವೋಚ್ಚ ನ್ಯಾಯಾಲಯದ ಆದೇಶ ಗಾಳಿಗೆ ತೂರಿದ ಗುತ್ತಿಗೆದಾರ



ಶ್ರೀಧರ್ ಆರ್.ಭಟ್

ನಂಜನಗೂಡು,ಜ.೫– ಆ ಕಾರ್ಮಿಕನ ಕೈಗೆ ಕವಚ ಇರಲಿಲ್ಲ... ಕಾಲಿಗೆ ಶೂ ಇರಲಿಲ್ಲ... ಆದರೆ ಆತ ಮಲ ಮೂತ್ರ ತುಂಬಿದ್ದ ಚರಂಡಿಗೆ ಇಳಿದು ಸ್ವಚ್ಛ ಮಾಡುತ್ತಿದ್ದ...

ಇದು ದಕ್ಷಿಣ ಕಾಶಿ ಎನಿಸಿಕೊಂಡಿರುವ ನಂಜನಗೂಡು ಪಟ್ಟಣದಲ್ಲಿ ಶುಕ್ರವಾರ ನಡೆದ ಮನಕಲಕುವ ಘಟನೆ. ಕೇಂದ್ರ ಸರ್ಕಾರದ ಸ್ವಚ್ಛತಾ ಸರ್ವೇಕ್ಷಣೆ ಪಟ್ಟಿಗೆ ಪಟ್ಟಣವೂ ಸೇರಿರುವ ಹಿನ್ನೆಲೆಯಲ್ಲಿ ನಗರಸಭೆ ನಾಗರಿಕರಲ್ಲಿ ಅರಿವು ಮೂಡಿಸುವ ಪ್ರಯತ್ನ ಮಾಡುತ್ತಿದೆ.

ಆದರೆ ಪಟ್ಟಣದ ಮಹಾತ್ಮ ಗಾಂಧಿ ಶತಾಬ್ದಿ ರಸ್ತೆಯಲ್ಲಿರುವ ಚರಂಡಿಗೆ ಸ್ಲ್ಯಾಬ್ ಹಾಕಿಸಲು ಗಬ್ಬು ನಾರುತ್ತಿದ್ದ ಚರಂಡಿಯನ್ನು ಶುಚಿಗೊಳಿಸಲು ನಿರ್ಧರಿಸಲಾಯಿತು. ಈ ಕಾಮಗಾರಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಬರುತ್ತದೆ.

ಈ ಚರಂಡಿಯನ್ನು ಶುಚಿ ಮಾಡಿ ಎಷ್ಟು ದಿನವಾಗಿದೆಯೋ! ಈ ಭಾಗದ ಮನೆಗಳಿಗೆ ಒಳಚರಂಡಿ ವ್ಯವಸ್ಥೆ ಇದೆ ಆದರೆ ಸಂಪರ್ಕ ಕೊಟ್ಟಿಲ್ಲ ಹೀಗಾಗಿ ಒಳಚರಂಡಿ ಸೇರಬೇಕಿದ್ದ ಈ ಭಾಗದ ನಿವಾಸಿಗಳ ಮಲ, ಮೂತ್ರಾದಿ ಗಳೆಲ್ಲವೂ ಈ ಚರಂಡಿಗೇ ಬಂದು ಸೇರುತ್ತದೆ.

> ನಗರಸಭೆಯವರೇ ನೀಡಿದ ದೂರವಾಣಿ ೮೦೨೪೯೯ ೬೩೫೦೦ ಸಂಖ್ಯೆಗೆ ಕರೆ ಮಾಡಿದಾಗ ಈ ಕಾರ್ಮಿಕರನ್ನು ಕಳುಹಿಸಿಕೊಟ್ಟಿದ್ದಾರೆ. ಆದರೆ, ಈ ಕಾರ್ಮಿಕ ಬರಿಗೈನಲ್ಲಿಯೇ ಸ್ವಚ್ಛತಾ ಕೆಲಸ ಮಾಡುತ್ತಿದ್ದುದು ತಮ್ಮ ಗಮನಕ್ಕೆ ಬಂದಿಲ್ಲ. ಚರಂಡಿ ಸ್ವಚ್ಛತಾ ಕೆಲಸವನ್ನು ಕಾರ್ಮಿಕರಿಂದ ಬರಿಗೈನಲ್ಲಿ ಮಾಡಿಸುವುದು ಅಪರಾಧ ಎಂಬುದು ತಿಳಿದಿದೆ.
> –ವಿಕಾಸ್, ಇಂಜಿನಿಯರ್

⏭ ೫

ಹೆಲ್ಮೆಟ್: ಗಡುವು ವಿಸ್ತರಣೆ

ಮತ್ತೆ ೯ರಿಂದ 'ಆಪರೇಷನ್ ಸೇಫ್ ರೈಡ್'

ಮೈಸೂರು,ಜ.೫– ಉತ್ತಮ ಗುಣಮಟ್ಟದ, ಐಎಸ್ಐ ಮಾರ್ಕ್ ಇರುವ ಹೆಲ್ಮೆಟ್ ಖರೀದಿಸಲು ವಾಹನ ಸವಾರರಿಗೆ ನಗರ ಪೊಲೀಸರು ಹೆಚ್ಚಿನ ಕಾಲಾವಕಾಶ ನೀಡಿದ್ದಾರೆ.

ಶಿರಸ್ತ್ರಾಣ ಖರೀದಿಗೆ ನೀಡಿದ್ದ ಗಡುವನ್ನು ಜ.೮ ರವರೆಗೆ ವಿಸ್ತರಿಸಲಾಗಿದೆ. 'ಆಪರೇಷನ್ ಸೇಫ್ ರೈಡ್' ಜ.೯ರಿಂದ ಮುಂದುವರೆಯಲಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಎ.ಸುಬ್ರಹ್ಮಣ್ಯೇಶ್ವರರಾವ್ ಶುಕ್ರವಾರ ಹೇಳಿದ್ದಾರೆ.

ಈ ಮೊದಲು ಗುಣಮಟ್ಟದ ಹೆಲ್ಮೆಟ್ ಖರೀದಿಸಲು ಜ.೫ರವರೆಗೆ ಕಾಲಾವಕಾಶ ನೀಡಲಾಗಿತ್ತು. ಆದರೆ ಸಾರ್ವಜನಿಕರು ಹೆಚ್ಚಿನ ಕಾಲಾವಕಾಶ ಕೋರಿದ್ದರಿಂದ ಗಡುವು ವಿಸ್ತರಿಸಲಾಗಿದೆ ಎಂದು ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

⏭ ೫

ನರಸೀಪುರಕ್ಕೆ ಬೋಸ್?

ಜನರ ಒತ್ತಾಯವಿದೆ; ಪಕ್ಷ, ತಂದೆ ಅನುಮತಿ ನೀಡಿದರೆ ಸ್ಪರ್ಧಿಸಿ ಗೆಲ್ಲುವೆ: ಸುನಿಲ್ ಬೋಸ್ ವಿಶ್ವಾಸ

ದಿನೇಶ್ ಕುಮಾರ್

ಮೈಸೂರು,ಜ.೫– ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಹಿರಿಯ ನಾಯಕ ಡಾ.ಎಚ್.ಸಿ.ಮಹದೇವಪ್ಪ ಅವರ ಪುತ್ರ ಸುನಿಲ್ ಬೋಸ್ ಅವರು ಕಳೆದ ಹಲವು ವರ್ಷಗಳಿಂದ ರಾಜಕೀಯ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವ ಮೂಲಕ ತಮ್ಮದೇ ಆದ ಛಾಪು ಮೂಡಿಸಿದ್ದು, ಇದೀಗ ತಿ.ನರಸೀಪುರ ಕ್ಷೇತ್ರದಿಂದ ಮುಂಬರುವ ಚುನಾವಣೆಯಲ್ಲಿ ಕಣಕ್ಕಿಳಿಯುವ ಉತ್ಸುಕತೆ ತೋರಿದ್ದಾರೆ.

'ಆಂದೋಲನ'ದೊಂದಿಗೆ ಶುಕ್ರವಾರ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡ ಅವರು, ಕ್ಷೇತ್ರದ ಕಾರ್ಯಕರ್ತರು, ಜನರ ಆಶಯ ಹಾಗೂ ಒತ್ತಾಯದ ಮೇರೆಗೆ ಚುನಾವಣೆಗೆ ಸ್ಪರ್ಧಿಸುವ ಇಂಗಿತವನ್ನು ಸುನಿಲ್ ಬೋಸ್ ವ್ಯಕ್ತಪಡಿಸಿದರು.

'ರಾಜಕೀಯ ಕ್ಷೇತ್ರ ನನಗೆ ಹೊಸದೇನೂ ಅಲ್ಲ. ಕಳೆದ ಹತ್ತು ವರ್ಷಗಳಿಂದ ಜನರ ಮಧ್ಯೆಯೇ ಇದ್ದು, ಅವರ ಸಮಸ್ಯೆಗಳನ್ನು ಅರಿತಿದ್ದೇನೆ. ತಿ.ನರಸೀಪುರ ಕ್ಷೇತ್ರದಲ್ಲಿನ ಜನತೆ ಹಾಗೂ ಕಾರ್ಯಕರ್ತರು ಚುನಾವಣೆಯಲ್ಲಿ ಸ್ಪರ್ಧಿಸುವಂತೆ ನನ್ನನ್ನು ಒತ್ತಾಯಿಸುತ್ತಿದ್ದಾರೆ. ಪಕ್ಷ ಹಾಗೂ ತಂದೆಯವರು ಒಪ್ಪಿಗೆ ನೀಡಿದರೆ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲು ಸಿದ್ಧನಿದ್ದೇನೆ' ಎಂದು ಬೋಸ್ ಹೇಳಿದರು.

ತಂದೆಯವರು ಪ್ರತಿನಿಧಿಸುವ ತಿ.ನರಸೀಪುರ ಕ್ಷೇತ್ರ ನನಗೆ ಚಿರಪರಿಚಿತ. ಲೋಕೋಪಯೋಗಿ ಸಚಿವರಾಗಿ ಅಧಿಕಾರವನ್ನು ವಹಿಸಿಕೊಂಡ ಬಳಿಕ ಅವರು ಸಹಜವಾಗಿ ರಾಜ್ಯಾದ್ಯಂತ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದಂತೆ ಸುತ್ತಾಡಬೇಕಿತ್ತು. ಹೀಗಾಗಿ ಕ್ಷೇತ್ರಕ್ಕೆ ಅಂದುಕೊಂಡಷ್ಟು ಸಮಯವನ್ನು ಮೀಸಲಿಡಲು ಅವರಿಗೆ ಸಾಧ್ಯವಾಗಿರಲಿಲ್ಲ. ಹೀಗಾಗಿ ತಂದೆಯವರ ಪರವಾಗಿ ನಾನೇ ಕ್ಷೇತ್ರಾದ್ಯಂತ ಸಂಚರಿಸಿದ್ದೇನೆ. ಕ್ಷೇತ್ರದ ಪ್ರತಿ ಹಳ್ಳಿಯೂ ನನಗೆ ಚಿರಪರಿಚಿತ. ಅಭಿವೃದ್ಧಿಗೆ ಸಂಬಂಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ಷೇತ್ರಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಹೀಗಾಗಿ ಸರ್ಕಾರದ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇನೆ ಎಂದರು.

ನೂರಾರು ಕೋಟಿ ರೂ. ಅನುದಾನದಲ್ಲಿ ಕ್ಷೇತ್ರ ವ್ಯಾಪ್ತಿಯ ಬಹುತೇಕ ಗ್ರಾಮಗಳಲ್ಲಿ ರಸ್ತೆ, ಒಳಚರಂಡಿ, ಸಮುದಾಯ ಭವನ ನಿರ್ಮಾಣ ಸೇರಿದಂತೆ ಅನೇಕ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಖುದ್ದು ನಾನೇ ನಿಂತು ಕಾಮಗಾರಿಗಳನ್ನು ಮಾಡಿಸಿದ್ದೇನೆ. ಕ್ಷೇತ್ರದ ಯಾವುದೇ ಗ್ರಾಮದಲ್ಲಿಯೂ ಕೆಲಸ ಆಗುತ್ತಿಲ್ಲ ಎಂಬ ದೂರು ಬಾರದಂತೆ ನೋಡಿಕೊಂಡಿದ್ದೇನೆ ಎಂದು ವಿವರಿಸಿದರು.

ಯೋಜನೆಗಳು ಹಾಗೂ ಕಾಮಗಾರಿ ವಿಚಾರ ಬಂದಾಗ ಪಕ್ಷಾತೀತ ಹಾಗೂ ಜಾತ್ಯತೀತವಾಗಿ ಕೆಲಸ ನಿರ್ವಹಿಸಿದ್ದೇನೆ. ದಲಿತರು, ವೀರಶೈವರು, ಉಪ್ಪಾರರು, ಅಲ್ಪಸಂಖ್ಯಾತರು ಸೇರಿದಂತೆ ಕ್ಷೇತ್ರದಲ್ಲಿ ಎಲ್ಲರೊಂದಿಗೆ ವಿಶ್ವಾಸದಿಂದ ನಡೆದುಕೊಂಡಿದ್ದೇನೆ. ಅಭಿವೃದ್ಧಿಗೆ ಸಂಬಂಧಿಸಿದಂತೆ ಅವರು ನೀಡುವ ಸಲಹೆಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿದ್ದೇನೆ ಎಂದರು.

ಈ ಎಲ್ಲ ಕಾರಣಗಳಿಂದಾಗಿ ಕ್ಷೇತ್ರದ ಜನರು ನನ್ನನ್ನು ಚುನಾವಣೆಗೆ ಸ್ಪರ್ಧಿಸುವಂತೆ ಪ್ರೀತಿ ಪೂರ್ವಕವಾಗಿ ಒತ್ತಾಯಿಸುತ್ತಲೇ ಇದ್ದಾರೆ. ಆದರೆ, ಪಕ್ಷದ ವರಿಷ್ಠರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಾಗೂ ತಂದೆಯವರ ತೀರ್ಮಾನವೇ ಅಂತಿಮ. ಪಕ್ಷ ಸ್ಪರ್ಧಿಸಲು ಸೂಚಿಸಿದರೆ ಸ್ಪರ್ಧಿಸುತ್ತೇನೆ. ಹಾಗೂ ಕ್ಷೇತ್ರದ ಜನರು ಆರಿಸಿ ಕಳುಹಿಸುತ್ತಾರೆಂಬ ಅದಮ್ಯ ವಿಶ್ವಾಸವೂ ನನಗಿದೆ ಎಂದರು.

ನನ್ನ ಅಭ್ಯಂತರವಿಲ್ಲ

ನನ್ನ ಮಗ ಸುನಿಲ್ ಬೋಸ್ ಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತ. ಪಕ್ಷ ನೀಡಿದ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾನೆ. ಕಾರ್ಯಕರ್ತರು, ಕ್ಷೇತ್ರದ ಜನರು ಆಪೇಕ್ಷೆ ಪಟ್ಟರೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಾನೆ. ಜನರಿಗೆ ಒಳ್ಳೆಯದು ಮಾಡುವ ಉದ್ದೇಶವಿದ್ದರೆ ನನ್ನ ಮಗನಾದರೂ ಸರಿ, ಬೇರೆ ಯಾರಾದರೂ ಸರಿ ರಾಜಕೀಯಕ್ಕೆ ಬರಲಿ. ಅದಕ್ಕೆ ನನ್ನ ಅಭ್ಯಂತರವಿಲ್ಲ.

–ಡಾ.ಎಚ್.ಸಿ.ಮಹದೇವಪ್ಪ, ಸಚಿವರು

ನಂಜನಗೂಡು ಉಪ ಚುನಾವಣೆ

ನಂಜನಗೂಡು ಉಪ ಚುನಾವಣೆ ನನಗೆ ಸಾಕಷ್ಟು ಅನುಭವ ನೀಡಿದೆ. ವಿ.ಶ್ರೀನಿವಾಸಪ್ರಸಾದ್ ಅಂತಹ ಹಿರಿಯರ ಎದುರು ಕೆಲಸ ಮಾಡಬೇಕಾಗಿ ಬಂದಿತ್ತು. ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಲೇಬೇಕೆಂಬ ಕಾರಣಕ್ಕಾಗಿ ಹಗಲಿರುಳು ಎನ್ನದೇ ಕ್ಷೇತ್ರದ ಕಾರ್ಯಕರ್ತರೊಂದಿಗೆ ಕೆಲಸ ನಿರ್ವಹಿಸಿದ್ದೇನೆ. ಹೀಗಾಗಿ ಚುನಾವಣಾ ರಾಜಕೀಯದ ಅನುಭವ ಸಾಕಷ್ಟಾಗಿದೆ. ಇದು ಮುಂದಿನ ಚುನಾವಣೆಯಲ್ಲಿ ನೆರವಾಗಲಿದೆ. ಕ್ಷೇತ್ರದ ಜನರ ಆಶಯಕ್ಕನುಗುಣವಾಗಿ ಪಕ್ಷ ಟಿಕೆಟ್ ನೀಡಿದರೆ ಗೆಲುವು ಸಾಧಿಸುವೆ ಎಂದು ಸುನಿಲ್ ಬೋಸ್ ಹೇಳಿದರು.

ನಷ್ಟದಲ್ಲಿ ಸೆಸ್ಕ್

ವಿದ್ಯುತ್ ದರ ಹೆಚ್ಚಳಕ್ಕೆ ಕೆಇಆರ್‌ಸಿಗೆ ಮನವಿ

ಟಿ.ವಿ.ರಾಜೇಶ್ವರ್

ಮೈಸೂರು,ಜ.೫– ರಾಜ್ಯದ ವಿದ್ಯುತ್ ನಿಗಮಗಳು ನಷ್ಟದ ಕಾರಣ ನೀಡಿ ವಿದ್ಯುತ್ ದರ ಹೆಚ್ಚಿಸಲು ಅವಕಾಶ ನೀಡುವಂತೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ (ಕೆಇಆರ್‌ಸಿ) ಮನವಿ ಸಲ್ಲಿಸಿವೆ. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ಸಹ ದರ ಹೆಚ್ಚಳಕ್ಕೆ ಮನವಿ ಮಾಡಿದೆ.

ಸದ್ಯದ ವಿದ್ಯುತ್ ದರ ಆಧರಿಸಿ ಬರುತ್ತಿರುವ ಆದಾಯ ಹಾಗೂ ನಿಗಮದ ವಾರ್ಷಿಕ ರೆವಿನ್ಯೂ ಅಗತ್ಯದ ನಡುವೆ ಸಮತೋಲನ ಇಲ್ಲದ ಹಿನ್ನೆಲೆಯಲ್ಲಿ ದರ ಹೆಚ್ಚಳ ಅನಿವಾರ್ಯ ಎಂದು ಉಪ ಪ್ರಧಾನ ವ್ಯವಸ್ಥಾಪಕರು ಕೆಇಆರ್‌ಸಿಗೆ ಸಲ್ಲಿಸಿದ ಮನವಿಯಲ್ಲಿ ತಿಳಿಸಿದ್ದಾರೆ.

೨೦೧೬ರಲ್ಲಿ ೧ ಯೂನಿಟ್‌ಗೆ ಸರಾಸರಿ ಸರಬರಾಜು ವೆಚ್ಚ ಸೇರಿ ೬.೪೧ ರೂ. ಖರ್ಚು ಆಗುತ್ತಿತ್ತು. ಆದರೆ, ಆದಾಯ ೧ ಯೂನಿಟ್‌ಗೆ ೫.೬೨ ರೂ. ಮಾತ್ರ ಬರುತ್ತಿತ್ತು. ಇದರಿಂದ ಸೆಸ್ಕ್‌ಗೆ ಪ್ರತಿ ಯೂನಿಟ್‌ಗೆ ೭೯ ಪೈಸೆ ನಷ್ಟವಾಗುತ್ತಿತ್ತು. ೨೦೧೮ರಲ್ಲಿ ಪ್ರತಿ ಯೂನಿಟ್ ವಿದ್ಯುತ್ ಸರಬರಾಜಿಗೆ ೭.೩೪ ರೂ. ವೆಚ್ಚ ತಗುಲಲಿದ್ದು, ನಿರೀಕ್ಷಿತ ಆದಾಯ ಪ್ರತಿ ಯೂನಿಟ್‌ಗೆ ೬.೨೧ ರೂ. ಇರಲಿದೆ. ಇದರಿಂದ ಸೆಸ್ಕ್‌ಗೆ ಪ್ರತಿ ಯೂನಿಟ್‌ಗೆ ೧.೧೩ ರೂ. ನಷ್ಟವಾಗಲಿದೆ. ಈ ಕೊರತೆ ನೀಗಿಸಲು ಗೃಹ ಬಳಕೆಯ ಪ್ರತಿ ಯೂನಿಟ್‌ಗೆ ೫೬ ಪೈಸೆಯಿಂದ ೧.೨೫ ರೂ.ಗೆ ಹೆಚ್ಚಿಸುವಂತೆ ಮನವಿ ಸಲ್ಲಿಸಲಾಗಿದೆ.

⏭ ೫

ವರ್ಷ	ಆದಾಯ	ಅಗತ್ಯ	ಕೊರತೆ
೨೦೧೫–೧೬	೩,೬೫೧.೭೬	೪,೧೪೮.೩೦	೪೯೬.೫೫
೨೦೧೬–೧೭	೪,೦೨೬.೭೦	೩,೯೬೮.೪೬	೫೮.೨೫
೨೦೧೭–೧೮	೪,೨೭೯.೮೯	೫,೦೪೨.೧೨	೭೬೨.೨೩

ಬಿಜೆಪಿ ಜತೆ ಮೈತ್ರಿ ಇಲ್ಲ: ಎಚ್‌ಡಿಕೆ

ಉತ್ತರ ಕರ್ನಾಟಕ ಪ್ರವಾಸ ಆರಂಭಿಸಿದ ಜಾ.ದಳ ರಾಜ್ಯಾಧ್ಯಕ್ಷರ ಸ್ಪಷ್ಟನುಡಿ

ಬೆಳಗಾವಿ,ಜ.೫– ಚುನಾವಣೆ ನಂತರ ರಾಜ್ಯದಲ್ಲಿ ಅತಂತ್ರ ಪರಿಸ್ಥಿತಿ ನಿರ್ಮಾಣವಾದರೆ ಬಿಜೆಪಿಯೊಂದಿಗೆ ಸೇರಿ ಸಮ್ಮಿಶ್ರ ಸರ್ಕಾರ ರಚಿಸುವುದಿಲ್ಲ ಎಂದು ಜಾ.ದಳ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಸ್ಪಷ್ಟ ಮಾತುಗಳಲ್ಲಿ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ಅವರು, ಕಾಂಗ್ರೆಸ್ ಮತ್ತು ಬಿಜೆಪಿ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಬಿಜೆಪಿ ಜತೆ ಜಾ.ದಳ ಕೈಜೋಡಿಸುವ ವಿಚಾರ ಸತ್ಯಕ್ಕೆ ದೂರ. ಇದೆಲ್ಲಾ ಸಂಪೂರ್ಣ ಆಧಾರ ರಹಿತ ಎಂದರು.

ಸಿದ್ದರಾಮಯ್ಯ ಸರ್ಕಾರ ನಾಲ್ಕೂವರೆ ವರ್ಷ ಪೂರೈಸಿದ ಬಗ್ಗೆ ಸಾವಿರಾರು ಕೋಟಿ ರೂ. ಖರ್ಚು ಮಾಡಿ ದೊಡ್ಡದಾಗಿ ಜಾಹೀರಾತು ಕೊಡಲಾಗುತ್ತಿದೆ. ಹೈದರಾಬಾದ್ ಕರ್ನಾಟಕ ಭಾಗದ ಅಭಿವೃದ್ಧಿ ಕುರಿತೂ ಜಾಹೀರಾತಿನಲ್ಲಿ ಹೇಳಿಕೊಳ್ಳಲಾಗುತ್ತಿದೆ. ಮುಂದೆ ಮಾಡಲಿರುವ ಸಾಧನೆಯ ಪಟ್ಟಿಯನ್ನೂ ಜಾಹೀರಾತಿನಲ್ಲಿ ಪ್ರಕಟಿಸಲಾಗುತ್ತಿದೆ. ಇವರ ಸಾಧನೆಗಳು ಜಾಹೀರಾತಿನಲ್ಲಿ ಬಿಟ್ಟರೆ ಬೇರೆ ಯಾವ ಕಡೆಯೂ ಆಗಿಲ್ಲ ಎಂದು ಟೀಕಿಸಿದರು.

ಈಗಿನ ಸಿಎಂ ಹೋದಲ್ಲೆಲ್ಲಾ ಬೇರೆಯವರ ಹಾವಭಾವಗಳನ್ನು ಅನುಕರಣೆ ಮಾಡಲು ಶುರು ಮಾಡಿದ್ದಾರೆ. ಆ ಮೂಲಕ ಸಿ.ಎಂ.ಇಬ್ರಾಹಿಂ ಅವರ ಸ್ಥಾನವನ್ನು ತುಂಬಿದ್ದಾರೆ ಎಂದು ಲೇವಡಿ ಮಾಡಿದರು.

⏭ ೮

ಸಿದ್ದರಾಮಯ್ಯ ಯಾರು?

ನನ್ನನ್ನು ಮುಖ್ಯಮಂತ್ರಿ ಮಾಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುವವರು ರಾಜ್ಯದ ಜನರೇ ಹೊರತು ಸಿದ್ದರಾಮಯ್ಯ ಅಲ್ಲ. ನಾನು ಮುಖ್ಯಮಂತ್ರಿ ಆಗುವುದಿಲ್ಲ ಎನ್ನಲು ಸಿದ್ದರಾಮಯ್ಯ ಯಾರು? ೬೫ ಕ್ಷೇತ್ರದಲ್ಲಿ ಕಾಂಗ್ರೆಸ್ ಸೋಲುತ್ತದೆ ಎಂಬ ಚಿಂತೆ ಸಿದ್ದರಾಮಯ್ಯ ಅವರನ್ನು ಕಾಡುತ್ತಿದೆ. ಹಾಗಾಗಿ ಆ ಕ್ಷೇತ್ರಗಳಲ್ಲಿ ಹೊಸಮುಖ ನಿಲ್ಲಿಸುವ ತಂತ್ರ ಹೂಡಿದ್ದಾರೆ

–ಎಚ್.ಡಿ.ಕುಮಾರಸ್ವಾಮಿ

ಮತ್ತೆ ಹುಲಿರಾಯ ಪ್ರತ್ಯಕ್ಷ

ಜನರಿಗೆ
ಗೋಚರ,
ಕಾರ್ಯಾಚರಣೆ
ತಂಡಕ್ಕೆ
ಅಗೋಚರ

ಎಚ್.ಡಿ.ಕೋಟೆ,ಜ.೫– ತಾಲ್ಲೂಕಿನ ನಾಗರಹೊಳೆ ಅಭಯಾರಣ್ಯ ಸಮೀಪ ಅಂತರಸಂತೆಯ ನೂರಲಕುಪ್ಪೆ ಬಳಿ ರೈತರ ಜಮೀನಿನಲ್ಲಿ ಶುಕ್ರವಾರ ಬೆಳಿಗ್ಗೆ ಹುಲಿ ಮತ್ತೆ ಕಾಣಿಸಿಕೊಂಡಿದ್ದು, ಜನರಲ್ಲಿ ಆತಂಕ ಹೆಚ್ಚಿದೆ.

ನೂರಲಕುಪ್ಪೆಯ ರಾಜಶೇಖರ್ ಎಂಬವರ ಜಮೀನಿನ ಬಳಿ ಶುಕ್ರವಾರ ಬೆಳಿಗ್ಗೆ ೧೦ ಗಂಟೆ ವೇಳೆ ಹುಲಿ ಕಾಣಿಸಿಕೊಂಡಿದೆ. ಸುದ್ದಿ ತಿಳಿದ ಅರಣ್ಯ ಇಲಾಖೆಯ ತಂಡ ಮಧ್ಯಾಹ್ನ ೨ ಗಂಟೆ ವೇಳೆ ೫ ಸಾಕಿದ ಆನೆಗಳೊಂದಿಗೆ ಈ ಭಾಗದಲ್ಲಿ ಕಾರ್ಯಾಚರಣೆ ನಡೆಸಿದರೂ ಹುಲಿಯ ಸುಳಿವೇ ಸಿಗಲಿಲ್ಲ.

ಕಳೆದೊಂದು ವಾರದಿಂದ ಈ ಹುಲಿ ಈ ಭಾಗದ ಹೊಲ–ಗದ್ದೆಗಳಲ್ಲಿ ಅಡ್ಡಾಡುವ ಹಸುಗಳನ್ನು ಹಿಡಿದು ತಿಂದು ಹಾಕಿದೆ. ಸೆರೆ ಹಿಡಿಯಲು ಅರಣ್ಯ ಇಲಾಖೆ ಬೋನು ಇರಿಸಿದ್ದರೂ ಅದರತ್ತ ಸುಳಿಯದೇ ಜಾಣ್ಮೆ ತೋರುತ್ತಿದೆ.

ಜನರ ಆತಂಕ: ಅರಣ್ಯ ಇಲಾಖೆಯು ಸಾಕಿದ ಆನೆಗಳು, ಮಾವುತರನ್ನು ಬಳಸಿಕೊಂಡು, ಹುಲಿ ಸೆರೆಯಲ್ಲಿ ಅನುಭವ ಪಡೆದಿರುವವರನ್ನು ಜತೆಗಿಟ್ಟುಕೊಂಡು ಕೆಲ ದಿನಗಳಿಂದ ಕಾರ್ಯಾಚರಣೆ ನಡೆಸುತ್ತಿದೆ.

⏭ ೫

ಲಾರಿ ಹರಿಸಿ ಕೊಲೆ

> ಮದ್ಯದ ಅಮಲಿನಲ್ಲಿ ಸ್ನೇಹಿತರ ಜಗಳ; ಠಾಣೆಗೆ ತೆರಳಿ ಶರಣಾದ ಆರೋಪಿ

ಕೃ.ರಾ.ಪೇಟೆ,ಜ.೫– ಮದ್ಯದ ಅಮಲಿನಲ್ಲಿ ಜಗಳ ಶುರುವಿಟ್ಟುಕೊಂಡ ಚಾಲಕನೊಬ್ಬ, ಬಳಿಕ ಕೋಪೋದ್ರಿಕ್ತನಾಗಿ ಸ್ನೇಹಿತನ ಮೇಲೆಯೇ ಲಾರಿ ಹರಿಸಿ ಭೀಕರವಾಗಿ ಕೊಲೆ ಮಾಡಿದ ಘಟನೆ ತಾಲ್ಲೂಕಿನ ಕಿಕ್ಕೇರಿಯಲ್ಲಿ ಶುಕ್ರವಾರ ನಡೆದಿದೆ.

ತಮಿಳುನಾಡಿನ ಕೊಯಮತ್ತೂರು ಬಳಿಯ ಪೊಲ್ಲಾಚಿ ನಾಗೂರು ಗ್ರಾಮದ ರಾಜನ್(೨೪) ಮೃತ ವ್ಯಕ್ತಿ. ಈತನ ಸ್ನೇಹಿತ ಮುರಳಿಯೇ ಲಾರಿ ಹತ್ತಿಸಿ ಕೊಲೆ ಮಾಡಿದ ಆರೋಪಿ.

ರಾಜನ್, ಮುರಳಿ ಒಂದೇ ಗ್ರಾಮದವರು. ಕಿಕ್ಕೇರಿ ಬಳಿ ಇರುವ ತೆಂಗಿನ ಚಿಪ್ಪಿನ ಕಾರ್ಖಾನೆಯಲ್ಲಿ ಚಾಲಕರಾಗಿದ್ದರು. ಗುರುವಾರ ರಾತ್ರಿ ಮದ್ಯ ಸೇವನೆ ವೇಳೆ ಇಬ್ಬರ ನಡುವೆ ಜಗಳ ಆರಂಭವಾಗಿದೆ. ಸಿಟ್ಟಿಗೆದ್ದ ಮುರಳಿ ಲಾರಿ ಚಲಾಯಿಸಿಕೊಂಡು ಬಂದು ರಾಜನ್ ಮೇಲೆ ಹತ್ತಿಸಿದ್ದಾನೆ.

⏭ ೮

'ಇಶಾಕಾನ್' ೫೦... ಮೈಸೂರಿನ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ ಜಿಮ್‌ಖಾನದ ಪಂಚವಟಿ ಕ್ಯಾಂಪಸ್‌ನಲ್ಲಿ ಶುಕ್ರವಾರ ಸಂಜೆ ಆಯೋಜಿಸಿದ್ದ 'ಇಶಾಕಾನ್'ನ ೫೦ನೇ ವಾರ್ಷಿಕ ಸಮ್ಮೇಳನದಲ್ಲಿ ರಾಜ್ಯಪಾಲ ವಜುಭಾಯಿ ವಾಲಾ ಸಮ್ಮೇಳನದ ಲಾಂಛನವನ್ನು ರಿಮೋಟ್ ಬಟನ್ ಒತ್ತುವ ಮೂಲಕ ಅನಾವರಣಗೊಳಿಸಿದರು. ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಘದ ಅಧ್ಯಕ್ಷೆ ಡಾ.ಆಶಾ ಯತಿರಾಜ್, ನಿರ್ಗಮಿತ ಅಧ್ಯಕ್ಷೆ ಡಾ.ಮಾಧುರಿ ಘೋರೆ, ಇಂದ್ರಾನೀಲ್ ಚಟರ್ಜಿ, ಡಾ.ಎಸ್.ಪಿ.ಗೋಸಾಮಿ, ವಿ.ಕೃಷ್ಣ ಚಿತ್ರದಲ್ಲಿದ್ದಾರೆ.

⏭ ವರದಿ ಪುಟ ೩

ಸಂಕಷ್ಟದಲ್ಲಿ ಕೊಹ್ಲಿ ಪಡೆ

ಕೇಪ್‌ಟೌನ್,ಜ.೫–ಆರಂಭದಲ್ಲಿ ಆಘಾತಕ್ಕೆ ಒಳಗಾದರೂ ನಂತರ ಸಾವರಿಸಿಕೊಂಡ ದಕ್ಷಿಣ ಆಫ್ರಿಕಾ ತಂಡ ಇಲ್ಲಿ ಶುಕ್ರವಾರ ಆರಂಭವಾದ ಭಾರತದ ವಿರುದ್ಧದ ಮೊದಲ ಟೆಸ್ಟ್ ಪಂದ್ಯದ ಮೊದಲನೇ ದಿನದಂತ್ಯಕ್ಕೆ ೨೮೬ ರನ್‌ಗಳಿಸಿ ಸರ್ವ ಪತನ ಕಂಡಿತು. ಇದರ ಬೆನ್ನು ಹತ್ತಿದ ಭಾರತ ದಿನದ ಆಟ ಮುಕ್ತಾಯವಾದಾಗ ೨೮ ರನ್‌ಗೆ ೩ ವಿಕೆಟ್ ಕಳೆದುಕೊಂಡು ದಯನೀಯ ಸ್ಥಿತಿಯಲ್ಲಿದೆ.

⏭ ವರದಿ ಪುಟ ೧೦

ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 400
ದೂರವಾಣಿ: 2425156

22 ಕ್ಯಾರೆಟ್ ಚಿನ್ನದ ದರ
ತೊಳಸಿ
₹2760
1 ಗ್ರಾಂಗೆ
ಹಿಂದಿನ ದಿನದ ದರ
THOLASI JEWELS
ಅಶೋಕ ರೋಡ್, ಮೈಸೂರು
Ph: 2521926, 2441926